## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2007-08 ನೇ ಸಾಲಿನಲ್ಲಿ ಮುಂದುವರೆದ ಯೋಜನೆಗಾಗಿ ರಾಷ್ಟ್ರೀಯ ಕುಟುಂಬ ನೆರವು ಯೋಜನೆ ಅಡಿಯಲ್ಲಿ ಬಡತನ ರೇಖೆಗಿಂತ ಕೆಳಮಟ್ಟದಲ್ಲಿರುವ ಕುಟುಂಬದ ಸದಸ್ಯರು ಮೃತಪಟ್ಟಲ್ಲಿ ಅವರಿಗೆ ಅಂತ್ಯಸಂಸ್ಕಾರ ಸಹಾಯ ನಿಧಿ ಅಡಿಯಲ್ಲಿ ಜಿಲ್ಲಾಧಿಕಾರಿಗಳಿಗೆ ಅನುದಾನ ಬಿಡುಗಡೆ ಮಾಡುವ ಕುರಿತು.

**ಓದಲಾಗಿದೆ:** ಸರ್ಕಾರದ ಆದೇಶ ಸಂ:ಕಂ.ಇ 86 ಎಂಎಸ್‌ಟಿ 2007 ದಿನಾಂಕ: 24/04/2007.

**ಪ್ರಸ್ತಾವನೆ:**

ರಾಜ್ಯ ಸರ್ಕಾರವು ರಾಷ್ಟ್ರೀಯ ಕುಟುಂಬ ನೆರವು ಯೋಜನೆ ಅಡಿಯಲ್ಲಿ 2007-08 ನೇ ಸಾಲಿನ ಆಯವ್ಯಯದಲ್ಲಿ ರೂ.2500.00 ಲಕ್ಷಗಳನ್ನು ಒದಗಿಸಲಾಗಿರುತ್ತದೆ. ಈ ಅನುದಾನದ ಪೈಕಿ 1/3 ಭಾಗದಷ್ಟು ಆಯವ್ಯಯದ ಅನುದಾನ ಅಂದರೆ ರೂ.833.00 ಲಕ್ಷಗಳನ್ನು ಮೇಲೆ ಓದಲಾದ ಸರ್ಕಾರಿ ಆದೇಶದಲ್ಲಿ ರಾಷ್ಟ್ರೀಯ ಕುಟುಂಬ ನೆರವು ಯೋಜನೆ ಅಡಿಯಲ್ಲಿ ಬಡತನ ರೇಖೆಗಿಂತ ಕೆಳಮಟ್ಟದಲ್ಲಿರುವ ಕುಟುಂಬದ ಸದಸ್ಯರು ಮೃತಪಟ್ಟಲ್ಲಿ ಅವರ ಅಂತ್ಯಸಂಸ್ಕಾರಕ್ಕಾಗಿ ಕುಟುಂಬದ ಸದಸ್ಯರಿಗೆ ರೂ.1000-00 ಗಳಂತೆ ನೀಡಲು ಮೊದಲನೆ ಹಂತವಾಗಿ ರೂ.135.00 ಲಕ್ಷಗಳನ್ನು ಬಿಡುಗಡೆ ಮಾಡಿದೆ. ರಾಜ್ಯದ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಂದ ಅಂತ್ಯ ಸಂಸ್ಕಾರ ಯೋಜನೆಯ ಅನುಷ್ಠಾನಕ್ಕಾಗಿ ಹೆಚ್ಚಿನ ಹಣ ಬಿಡುಗಡೆಗೊಳಿಸಲು ಕೋರಿರುತ್ತಾರೆ ಅದರಂತೆ ಪ್ರಸ್ತುತ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಅನುದಾನದಲ್ಲಿ ಇನ್ನೂ ರೂ. 698-00 ಲಕ್ಷಗಳು ಉಳಿದಿದ್ದು ಈ ಪೈಕಿ ಎರಡನೆ ಹಂತವಾಗಿ ರೂ.200.00 ಲಕ್ಷಗಳನ್ನು ಅಂತ್ಯ ಸಂಸ್ಕಾರ ಯೋಜನೆಗಾಗಿ ಬಿಡುಗಡೆ ಮಾಡಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ

**ಸರ್ಕಾರದ ಆದೇಶ ಸಂ: ಆರ್‌ಡಿ 86 ಎಂಎಸ್‌ಟಿ 2007,ದಿನಾಂಕ: 15/11/2007.**

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಮಟ್ಟದಲ್ಲಿರುವ ಕುಟುಂಬದ ಸದಸ್ಯರು ಮೃತ ಹೊಂದಿದಲ್ಲಿ ಅವರ ಅಂತ್ಯ ಸಂಸ್ಕಾರಕ್ಕಾಗಿ "ಅಂತ್ಯ ಸಂಸ್ಕಾರ ಸಹಾಯನಿಧಿ" (Grant for funeral expenses) ನೆರವು ಯೋಜನೆ ಅಡಿ ರೂ.1000.00 ಗಳನ್ನು ನೀಡಲು ಈಗಾಗಲೇ ಈ ಯೋಜನೆಯ ಅನುಷ್ಠಾನಕ್ಕಾಗಿ ಹೊರಡಿಸಿರುವ ಮಾರ್ಗಸೂಚಿ / ಷರತ್ತುಗಳ ಸಂಖ್ಯೆ:ಆರ್‌ಡಿ 28 ಎಂಎಸ್ ಟಿ 2006 ದಿನಾಂಕ 8-6-2006 ರ ಅನ್ವಯ ಮಂಜೂರಾತಿ ನೀಡಿದೆ.

ಈ ಯೋಜನೆಗೆ ತಗಲುವ ವೆಚ್ಚ ರೂ.200.00 ಲಕ್ಷಗಳು (ರೂಪಾಯಿ ಎರಡು ನೂರು ಲಕ್ಷಗಳು ಮಾತ್ರ) ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ.

ಈ ಯೋಜನೆಗೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2235-60-102-1-03-059 ಇತರೆ ವೆಚ್ಚಗಳು ( ಯೋಜನೆ) ಅಡಿಯಲ್ಲಿ ಒದಗಿಸಲಾದ ಅನುದಾನದಲ್ಲಿ ಭರಿಸತಕ್ಕದ್ದು.

ಈ ಯೋಜನೆಯಡಿ ಪ್ರತಿ ಫಲಾನುಭವಿಗೆ ನೀಡುವ ಆರ್ಥಿಕ ನೆರವಿನ ಹಣವನ್ನು ಸಂಬಂಧಪಟ್ಟ ಆಯಾ ತಾಲ್ಲೂಕಿನ ತಹಸೀಲ್ದಾರರು ಮುಂಗಡವಾಗಿ ಎ.ಸಿ ಬಿಲ್ಲಿನ ಮೂಲಕ ಆಯಾ ತಿಂಗಳಲ್ಲಿ ವಿತರಿಸಲು ಬೇಕಾಗಬಹುದಾದ ಅಂದಾಜು ಮೊತ್ತವನ್ನು ಡ್ರಾ ಮಾಡಿ ಇಟ್ಟುಕೊಂಡು ಫಲಾನುಭವಿಗಳಿಗೆ ತಕ್ಷಣ ವಿತರಿಸುವುದು ಹಾಗೂ ಪ್ರತಿ ತಿಂಗಳ ಕೊನೆಯಲ್ಲಿ ಎನ್.ಡಿ.ಸಿ. ಬಿಲ್ಲು ತಯಾರಿಸಿ ಖಜಾನೆಗೆ ಸಲ್ಲಿಸುವುದರ ಮೂಲಕ ಲೆಕ್ಕ ಪತ್ರಗಳನ್ನು ಸರಿಹೊಂದಿಸಿಕೊಳ್ಳತಕ್ಕದ್ದು.

ಈ ಯೋಜನೆಯ ಅಂಕಿಅಂಶಗಳ ವರದಿಯ ಜೊತೆಗೆ ಹಣ ಬಳಕೆ ಪ್ರಮಾಣ ಪತ್ರವನ್ನು ವಿಮರ್ಷೆಗಾಗಿ ಸಂಬಂಧಪಟ್ಟ ತಹಸೀಲ್ದಾರವರು ಜಿಲ್ಲಾಧಿಕಾರಿಯವರಿಗೆ ಸಲ್ಲಿಸತಕ್ಕದ್ದು. ಜಿಲ್ಲಾಧಿಕಾರಿಯವರು ಪ್ರತಿ ತಿಂಗಳ ಹತ್ತನೇ ತಾರೀಖಿನೊಳಗೆ ಹಣ ಬಳಕೆ ಪ್ರಮಾಣ ಪತ್ರವನ್ನು ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯಕ್ಕೆ ಮತ್ತು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂ:ಎಫ್‌ಡಿ 1 ಟಿಎಫ್‌ಪಿ 96 ದಿನಾಂಕ:10-07-1996 ರಲ್ಲಿ ಇಲಾಖೆಯ ಕಾರ್ಯದರ್ಶಿಗಳಿಗೆ ನೀಡಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

15/11/07
(ಎಂ.ಕೆ.ನರಸಿಂಹಲು)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ ( ಭೂ.ಸು.ಕೋಶ)

ಇವರಿಗೆ,

1. ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ) (ಎ.ಮತ್ತು ಇ) ಕರ್ನಾಟಕ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಂದಾಯ ಇಲಾಖೆ ಬೆಂಗಳೂರು
3. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ವಿಧಾನ ಸೌಧ ಬೆಂಗಳೂರು.
4. ಮಾನ್ಯ ಉಪ ಮುಖ್ಯಮಂತ್ರಿಯವರ ಕಾರ್ಯದರ್ಶಿ. ವಿಧಾನ ಸೌಧ ಬೆಂಗಳೂರು.
5. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿ. ವಿಧಾನ ಸೌಧ ಬೆಂಗಳೂರು.
6. ಪ್ರಾದೇಶಿಕ ಆಯುಕ್ತರು.ಬೆಂಗಳೂರು/ಮೈಸೂರು/ಬೆಳಗಾವಿ/ಗುಲ್ಬರ್ಗಾ.
7. ಎಲ್ಲಾ ಜಿಲ್ಲಾಧಿಕಾರಿಗಳು.
8. ನಿರ್ದೇಶಕರು.ಖಜಾನೆ ಇಲಾಖೆ.ಬೆಂಗಳೂರು.
9. ಎಲ್ಲ ಜಿಲ್ಲಾ ಖಜಾನೆ ಹಾಗೂ ಉಪ ಖಜಾನೆ ಅಧಿಕಾರಿಗಳು.
10. ಹೆಚ್ಚುವರಿ ಪ್ರತಿ ಮತ್ತು ರಕ್ಷಾ ಕಡತ.

**ಸರ್ಕಾರದ ಆದೇಶ ಸಂಖ್ಯೆ: ಆರ್.ಡಿ.86 ಎಂ ಎಸ್ ಟಿ 2007 ಕ್ಕೆ ಅನುಬಂಧ.**

| ಕ್ರಮ ಸಂಖ್ಯೆ | ಜಿಲ್ಲೆಗಳ ಹೆಸರು | ಬಿಡುಗಡೆ ಮಾಡಲಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 1 | ಬೆಂಗಳೂರು ನಗರ | 7.00 |
| 2 | ಬೆಂಗಳೂರು ಗ್ರಾಮಾಂತರ | 7.00 |
| 3 | ಬೆಳಗಾವಿ | 7.00 |
| 4 | ಬಳ್ಳಾರಿ | 7.00 |
| 5 | ಬೀದರ್ | 7.00 |
| 6 | ಬಿಜಾಪುರ | 7.00 |
| 7 | ಬಾಗಲಕೋಟೆ | 7.00 |
| 8 | ಚಿತ್ರದುರ್ಗ | 7.00 |
| 9 | ಚಾಮರಾಜನಗರ | 7.00 |
| 10 | ಧಕ್ಷಿಣ ಕನ್ನಡ | 7.00 |
| 11 | ಧಾರವಾಡ | 7.00 |
| 12 | ದಾವಣಗೆರೆ | 7.00 |
| 13 | ಗುಲ್ಬರ್ಗಾ | 7.00 |
| 14 | ಗದಗ | 7.00 |
| 15 | ಹಾಸನ | 7.00 |
| 16 | ಹಾವೇರಿ | 7.00 |
| 17 | ಕೊಡಗು | 7.00 |
| 18 | ಕೋಲಾರ | 7.00 |
| 19 | ಕೊಪ್ಪಳ | 7.00 |
| 20 | ಮಂಡ್ಯ | 7.00 |
| 21 | ಮೈಸೂರು | 7.00 |
| 22 | ರಾಯಚೂರು | 7.00 |
| 23 | ಶಿವಮೊಗ್ಗ | 7.00 |
| 24 | ತುಮಕೂರು | 7.00 |
| 25 | ಉತ್ತರ ಕನ್ನಡ | 7.00 |
| 26 | ಉಡುಪಿ | 7.00 |
| 27 | ಚಿಕ್ಕಮಗಳೂರು | 7.00 |
| 28 | ರಾಮನಗರ | 5.50 |
| 29 | ಚಿಕ್ಕಬಳ್ಳಾಪುರ | 5.50 |
|  | **ಒಟ್ಟು** | **200.00** |

**( ಎಂ.ಕೆ.ನರಸಿಂಹಲು)**
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ. (ಭೂ ಕಂದಾಯ)